# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.730/2014/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ: 18.4.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯು:** ದೊಡ್ಡಬಳ್ಳಾಪುರ ತಾಲ್ಲೂಕು ಕಾಳಪ್ಪನಕುಂಟೆ ಕಸಬಾ ವೀರಭದ್ರನಪಾಳ್ಯದ ಸರ್ವೆ ನಂ.19 ಕ್ಷೇತ್ರ 1 ಎಕರೆ ಜಮೀನನ್ನು ಅನಧಿಕೃತ ಒತ್ತುವರಿದಾರರಿಂದ ತೆರವುಗೊಳಿಸಿ ಪುನ: ನಗರಸಭೆಯ ವಶಕ್ಕೆ ಪಡೆಯಲು ಸಂಬಂಧಪಟ್ಟವರಿಗೆ ಸೂಕ್ತ ಕ್ರಮಕೈಗೊಳ್ಳುವಂತೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ಡಿ.ಜಿ.ರಂಗನಾಥ್, ಸಂಜೆನಗರ, ದೊಡ್ಡಬಳ್ಳಾಪುರ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಆಯುಕ್ತಕರು, ನಗರಸಭೆ, ದೊಡ್ಡಬಳ್ಳಾಪುರ ಹಾಗೂ ಇತರರು, (ಇನ್ನು ಮುಂದೆ ಕ್ರಮವಾಗಿ 1 ರಿಂದ 5ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು ವೀರಬದ್ರನಪಾಳ್ಯದ ಸ.ನಂ.19 ಕ್ಷೇತ್ರ 1 ಎಕರೆ ಜಮೀನನ್ನು ಅನಧಿಕೃತವಾಗಿ ಸಾರ್ವಜನಿಕರು ಅತಿಕ್ರಮಿಸಿದ್ದು, ಅದನ್ನು ತೆರವುಗೊಳಿಸಲು ಮಾನ್ಯ ಜಿಲ್ಲಾಧಿಕಾರಿಗಳು ಆದೇಶ ನೀಡಿದ್ದರೂ ಸಹಾ ಎದುರುದಾರರು ಈ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಿರುವುದಿಲ್ಲ. ದೂರುದಾರರಿಗೆ ಸೇರಿದ ನಗರಸಭೆ ಖಾತೆ 2853/2853 ಸರ್ವೆ ನಂ.9/2ರ ಪ್ರದೇಶದಲ್ಲಿದ್ದ ಷೀಟಿನ ಮನೆಯನ್ನು ನ್ಯಾಯಾಲಯದ ಆದೇಶ ಒ.ಎಸ್.349/2010ರಲ್ಲಿ ಇದ್ದರೂ ಸಹಾ ಎದುರುದಾರರು ದೌರ್ಜನ್ಯಯುತವಾಗಿ ಒಡೆದುಹಾಕಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1ರಿಂದ 5ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ಆಪಾದನೆಗಳನ್ನು ಅಲ್ಲಗಳೆದು ದೂರುದಾರರು ದೊಡ್ಡಬಳ್ಳಾಪುರ ಪಟ್ಟಣದ ಸಂಜಯನಗರದ ಸ್ಮಶಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಅಕ್ರಮವಾಗಿ ಷೀಟಿನ ಮನೆಯನ್ನು ನಿರ್ಮಿಸಿದ್ದು, ಇದರಿಂದಾಗಿ ಸಾರ್ವಜನಿಕರಿಗೆ ಶವಸಂಸ್ಕಾರಕ್ಕಾಗಿ ರಸ್ತೆಯಲ್ಲಿ ಹಾದು ಹೋಗಲು ತೊಂದರೆಯಾಗುತ್ತಿದ್ದು, ಇದನ್ನು ತೆರವುಗೊಳಿಸುವಂತೆ ಸಾರ್ವಜನಿಕರು 1.6.2011ರಂದು ದೂರು ಸಲ್ಲಿಸಿ ಗಲಾಟೆ ಮಾಡಿರುತ್ತಾರೆ. ಆದ್ದರಿಂದ ಇದನ್ನು ಸ್ಥಳಪರಿಶೀಲನೆ ನಡೆಸಿ, ಇದು ಅನಧಿಕೃತವಾಗಿ ನಿರ್ಮಿಸಿದ ಷೀಟಿನ ಮನೆಯಾಗಿರುವುದರಿಂದ ಇದನ್ನು ತೆರವುಗೊಳಿಸಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ಈ ಪ್ರಕರಣದಲ್ಲಿ ದೂರುದಾರರ ಆಪಾದನೆಗಳ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ತಾಂತ್ರಿಕ ವಿಭಾಗಕ್ಕೆ ವಹಿಸಿದ್ದು, ಅವರು ತನಿಖೆ ಮಾಡಿ ವರದಿ ಸಲ್ಲಿಸಿದ್ದು, ಅದರಲ್ಲಿ ಎದುರುದಾರರು ಯಾವುದೇ ಅಕ್ರಮ ಎಸಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ.

5. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

6. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ತಾಂತ್ರಿಕ ವಿಭಾಗದ ವರದಿ, ದೂರುದಾರರ ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ತಾಂತ್ರಿಕ ವಿಭಾಗದವರು ದೂರುದಾರರು ಹಾಗೂ ಎದುರುದಾರರ ಸಮಕ್ಷಮ ಸ್ಥಳತನಿಖೆ ಮಾಡಿ ಕಂಡಿಕೆ 65 ಹಾಗೂ 66ರಲ್ಲಿ ಅಭಿಪ್ರಾಯಪಟ್ಟಂತೆ ಸರ್ವೆ ನಂ.9ರ 3 ಎಕರೆ 12 ಗುಂಟೆ ಜಮೀನು ದೂರುದಾರರ ಪಿತ್ರಾರ್ಜಿತ ಆಸ್ತಿಯಾಗಿದ್ದು, ಪಂಚಾಯತಿ ಪಾರಿಕತ್ ಮೂಲಕ ಅದು ದೂರುದಾರರ ಭಾಗಕ್ಕೆ ಬಂದಿರುತ್ತದೆ. ಆದರೆ ಪಕ್ಕದ ಜಮೀನು ಸರ್ವೆ ನಂ.20 ಸರ್ಕಾರಿ ಸ್ಮಷಾನಕ್ಕೆ ರಸ್ತೆ ಇಲ್ಲದ ಕಾರಣ 5.5 ಗುಂಟೆ ಜಮೀನಿನಲ್ಲಿ ಸರ್ಕಾರದಿಂದ ರಸ್ತೆ ನಿರ್ಮಿಸಿದ್ದು, ಇದರಲ್ಲಿ 4 ಗುಂಟೆ ರಸ್ತೆಗಾಗಿ ಬಳಸಿಕೊಳ್ಳಲಾಗಿದ್ದು, ಉಳಿಕೆ 1.5 ಗುಂಟೆ ಜಮೀನಿನಲ್ಲಿ ನಗರಸಭೆಯಿಂದ ಒಳಚರಂಡಿ ಕಾಮಗಾರಿ ಪ್ರಾರಂಬಿಸಲಾಗಿರುತ್ತದೆ. ಈ ಬಗ್ಗೆ ಒ.ಎಸ್.349/2010 ಅಂತ ಪ್ರಕರಣ ದಾಖಲಾಗಿದ್ದು, ಅದರಲ್ಲಿ ಅಂತಿಮ ಆದೇಶವಾಗಿರುತ್ತದೆ. ಈ 1.5 ಗುಂಟೆ ಪ್ರದೇಶದಲ್ಲಿ ದೂರುದಾರರು ಪರವಾನಿಗೆ ಪಡೆದು ಸಣ್ಣ ಷೀಟಿನ ಮನೆ ನಿರ್ಮಿಸಿದ್ದು, ಆದರೆ ಅದನ್ನು ಎದುರುದಾರರು ಒಡೆದುಹಾಕಿದ್ದಾರೆಂದು ಸ್ಥಳತನಿಖೆಯಲ್ಲಿ ದೂರುದಾರರು ತಿಳಿಸಿರುತ್ತಾರೆ.

7. ಆದರೆ ತನಿಖಾ ವರದಿಯ ಕಂಡಿಕೆ 66ರಲ್ಲಿ ಆಪಾದಿತ ಜಾಗದಲ್ಲಿ ಕಳೆದ 50 ವರ್ಷಗಳಿಂದ ರಸ್ತೆಯಿದ್ದು, 2009–10ನೇ ಸಾಲಿನ ಎಸ್.ಎಫ್.ಸಿ.ಅನುದಾನದಲ್ಲಿ ಸ್ಮಶಾನ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆಯಾಗಿದ್ದು, ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ದೂರುದಾರರು ಸ್ಮಶಾನದ ಸಂಪರ್ಕ ರಸ್ತೆಯಲ್ಲಿ ಅನಧಿಕೃತವಾಗಿ ಷೀಟಿನ ಷೆಡ್ ನಿರ್ಮಿಸಿ ಸಾರ್ವಜನಿಕರಿಗೆ ಶವ ಸಂಸ್ಕಾರಕ್ಕಾಗಿ ಓಡಾಡಲು ಅಡ್ಡಿಪಡಿಸಿರುತ್ತಾರೆ. ಆದ್ದರಿಂದ ನಗರಸಭೆಯಿಂದ ಆ ಷೆಡ್‌ನ್ನು ತೆರವುಗೊಳಿಸಲಾಗಿರುತ್ತದೆಯೆಂದು ಸಾರ್ವಜನಿಕರು ಹಾಗೂ ಎದುರುದಾರರು ತಿಳಿಸಿರುತ್ತಾರೆ.

8. ದೂರುದಾರರು ತಮ್ಮ ದೂರಿನೊಂದಿಗೆ ಸರ್ವೆ ನಂ.9ರಲ್ಲಿ ನಿರ್ಮಿಸಿರುವ ಷೆಡ್‌ನ ಬಗ್ಗೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ. ಎದುರುದಾರರು ಸಹ ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ತಮ್ಮ ಷೆಡ್ಡಿನ ಬಗ್ಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ದೂರುದಾರರು ನಿರ್ಮಿಸಿದ ಷೆಡ್ ಅನಧಿಕೃತವೆಂದು ಕಂಡುಬರುತ್ತದೆ. ಇಂತಹ ಅನಧಿಕೃತ ಷೆಡ್ ಸಾರ್ವಜನಿಕರಿಗೆ ರಸ್ತೆ ಸಂಪರ್ಕಕ್ಕೆ ತಡೆಯುಂಟುಮಾಡಿದ್ದರಿಂದ ಇದನ್ನು ಎದುರುದಾರರು ತೆರವುಗೊಳಿಸಿದ್ದರಲ್ಲಿ ಯಾವುದೇ ಕರ್ತವ್ಯಲೋಪ ಕಂಡುಬರುವುದಿಲ್ಲ.

9. ಆದರೆ ದೂರುದಾರರು ತಮ್ಮ ದೂರಿನಲ್ಲಿ ಆಪಾದಿಸಿರುವ ಸರ್ವೆ ನಂ.19ರಲ್ಲಿ 1 ಎಕರೆ ಜಮೀನನ್ನು ಸಾರ್ವಜನಿಕರು ಅನಧಿಕೃತವಾಗಿ ಒತ್ತುವರಿ ಮಾಡಿದಾಗ ಅದನ್ನು ತೆರವುಗೊಳಿಸುವಂತೆ ಜಿಲ್ಲಾಧಿಕಾರಿಗಳು ಆದೇಶ ನೀಡಿದ್ದರೂ ಸಹಾ ಎದುರುದಾರರು ಯಾವುದೇ ಕ್ರಮಕೈಗೊಂಡಿಲ್ಲವೆಂದು ಆಪಾದಿಸಿರುವ ಬಗ್ಗೆ ಪರಿಶೀಲಿಸಲಾಗಿ, ದೂರುದಾರರು ತಾಲ್ಲೂಕು ಸರ್ವೆಯರ್, ದೊಡ್ಡಬಳ್ಳಾಪುರ, ಅವರು ತಯಾರಿಸಿದ ಸ್ಕೆಚ್ ಸಲ್ಲಿಸಿದ್ದು, ಇದರಲ್ಲಿ 6 ಗುಂಟೆ ಜಾಗವನ್ನು ಸರ್ವೆ ನಂ.19/2ರ ಹಿಡುವಳಿದಾರರು ಪೂರಾ ಒತ್ತುವರಿ ಮಾಡಿರುತ್ತಾರೆ ಅಂತ ನಮೂದಿಸಿದ್ದು ಇರುತ್ತದೆ. ಆದರೆ ಯಾವೊಬ್ಬ ಎದುರುದಾರರು ಸರ್ವೆ ನಂ.19ರ ಜಮೀನನ್ನು ಸಾರ್ವಜನಿಕರು ಒತ್ತುವರಿ ಮಾಡಿದ ಬಗ್ಗೆ, ತಾವು ತೆಗೆದುಕೊಂಡ ಕ್ರಮದ ಬಗ್ಗೆ ನಮೂದಿಸಿರುವುದಿಲ್ಲ. ಆದರೆ ದೂರುದಾರರ ಪ್ರಕಾರ 1 ಎಕರೆ ಪ್ರದೇಶವನ್ನು ಸಾರ್ವಜನಿಕರು ಒತ್ತುವರಿ ಮಾಡಿದ್ದು, ಸರ್ವೆ ಸ್ಕೆಚ್ ಪ್ರಕಾರ 6 ಗುಂಟೆ ಜಾಗವನ್ನು ಸರ್ವೆ ನಂ.19/2ರ ಹಿಡುವಳಿದಾರರು ಒತ್ತುವರಿ ಮಾಡಿರುತ್ತಾರೆಂದು ಕಂಡುಬರುತ್ತದೆ. ಆದರೆ ಈ ಒತ್ತುವರಿಯು ಯಾವ ಅವಧಿಯಲ್ಲಿ ಆಗಿದೆ ಎನ್ನುವ ಬಗ್ಗೆ ನಿರ್ದಿಷ್ಟ ಮಾಹಿತಿ ಲಭ್ಯವಿಲ್ಲದ ಕಾರಣ ಎದುರುದಾರರ ಸೇವಾ ಅವಧಿಯಲ್ಲಿಯೇ ಈ

ಒತ್ತುವರಿಯಾಗಿದೆಯೆಂದು ಹೇಳಲು ಆಗುವುದಿಲ್ಲ. ಆದರೆ ಸರ್ವೆ ನಂ.19ರ 1 ಎಕರೆ ಜಮೀನನ್ನು ಅನಧಿಕೃತವಾಗಿ ಸಾರ್ವಜನಿಕರು ಒತ್ತುವರಿ ಮಾಡಿಕೊಂಡಿದ್ದು, ಅದನ್ನು ಒತ್ತುವರಿದಾರರಿಂದ ತೆರವುಗೊಳಿಸಿ ಪುನ: ದೊಡ್ಡಬಳ್ಳಾಪುರ ನಗರಸಭೆಯ ವಶಕ್ಕೆ ಪಡೆಯುವುದು ಅತ್ಯವಶ್ಯವೆಂದು ಕಂಡುಬರುತ್ತದೆ.

10. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೊಡ್ಡಬಳ್ಳಾಪುರ ತಾಲ್ಲೂಕು ಕಾಳಪ್ಪನಕುಂಟೆ ಕಸಬಾ ವೀರಭದ್ರನಪಾಳ್ಯದ ಸರ್ವೆ ನಂ.19 ಕ್ಷೇತ್ರ 1 ಎಕರೆ ಜಮೀನನ್ನು ಅನಧಿಕೃತ ಒತ್ತುವರಿದಾರರಿಂದ ತೆರವುಗೊಳಿಸಿ ಪುನ: ನಗರಸಭೆಯ ವಶಕ್ಕೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.